ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳು.

1217(1124) ಶ್ರೀ ಬುಕ್ಕೇಗೌಡ ಬಿ.ಎಸ್. (ಹೊಸಕೋಟೆ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆ ಮತಿಯಿಂದ ನಡೆಸಲ್ಪಡುತ್ತಿರುವ ವಿವಿಧ ವಸತಿ ನಿಲಯಗಳೆಷ್ಟು;

ಆ) ಈ ವಸತಿ ನಿಲಯಗಳಲ್ಲಿ ಖಾಲಿ ಇರುವ ಒಟ್ಟು ಹುದ್ದೆಗಳೆಷ್ಟು; (ಹುದ್ದೆವಾರು ವಿವರ ನೀಡುವುದು)

ಇ) ಈ ಹುದ್ದೆಗಳನ್ನು ತುಂಬಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ;

ಈ) ಇದಾಗಿದ್ದಲ್ಲಿ ಸದರಿ ಹುದ್ದೆಗಳನ್ನು ಯಾವಾಗ ತುಂಬಲಾಗುವುದು; ಇದಕ್ಕೆ ನೀತಿ ನಿಯಮಗಳೇನಾದರೂ ರಚಿಸಲಾಗಿದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆ ಮತಿಯಿಂದ ನಡೆಸಲ್ಪಡುತ್ತಿರುವ ವಿವಿಧ ವಸತಿ ನಿಲಯಗಳ ವಿವರ ಈ ಕೆಳಕಂಡಂತಿದೆ :-

ಸಮಾಜ ಕಲ್ಯಾಣ ಇಲಾಖೆ	ಹಿಂದುಳಿದ ವರ್ಗಗಳ ಇಲಾಖೆ	ಪರಿಶಿಷ್ಟ ವರ್ಗಗಳ ಇಲಾಖೆ	ಅಲ್ಪಸಂಖ್ಯಾತರ ಇಲಾಖೆ
1402	1403	117	12

ಆ) ಈ ವಸತಿ ನಿಲಯಗಳಲ್ಲಿ ಖಾಲಿ ಇರುವ ಒಟ್ಟು ಹುದ್ದೆಗಳನ್ನು ಅನುಬಂಧ-1 ರಲ್ಲಿ ತೋರಿಸಲಾಗಿದೆ.

ಇ) —ಹೌದು—

ಈ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಹುದ್ದೆಗಳನ್ನು ಚಾಲ್ತಿಯಲ್ಲಿರುವ ನೇಮಕಾತಿ ನಿಯಮಗಳ ಪ್ರಕಾರ ಭರ್ತಿ ಮಾಡಲಾಗುವುದು.

ಅನುಬಂಧ-I

ವಸತಿ ನಿಲಯಗಳಲ್ಲಿ ಖಾಲಿ ಇರುವ ಒಟ್ಟು ಹುದ್ದೆಗಳ ವಿವರ

1) ಸಮಾಜ ಕಲ್ಯಾಣ ಇಲಾಖೆ:

1.	ಬಾಲಕರ:ಬಾಲಕಿಯರ ವಿದ್ಯಾರ್ಥಿನಿಲಯ ಮೇಲ್ವಿಚಾರಕರು	-	569
2.	ಅಡಿಗೆಯವರು	-	724
3.	ಅಡಿಗೆ ಸಹಾಯಕರು	-	427
4.	ರಾತ್ರಿ ಕಾವಲುಗಾರರು	-	112
	ಒಟ್ಟು ಹುದ್ದೆಗಳು	-	1832

2) ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

1.	ಮೇಲ್ವಿಚಾರಕರು	-	55
2.	ಅಡಿಗೆಯವರು	-	81
3.	ಅಡಿಗೆ ಸಹಾಯಕರು	-	43
4.	ರಾತ್ರಿ ಕಾವಲುಗಾರರು	-	18
	ಒಟ್ಟು ಹುದ್ದೆಗಳು	-	197

3) ಅಲ್ಪ ಸಂಖ್ಯಾತರ ಇಲಾಖೆ:

1.	ವಾರ್ಡನ್	-	7
2.	ನಿಲಯ ಮೇಲ್ವಿಚಾರಕರು	-	5
3.	ಅಡಿಗೆಯವರು	-	20
4.	ಅಡಿಗೆ ಸಹಾಯಕರು	-	11
5.	ರಾತ್ರಿ ಕಾವಲುಗಾರರು	-	7
	ಒಟ್ಟು ಹುದ್ದೆಗಳು	-	50

4) ಹಿಂದುಳಿದ ವರ್ಗಗಳ ಇಲಾಖೆ:

1.	ಮೆಟ್ರಿಕ್ ಪೂರ್ವ ನಿಲಯ ಮೇಲ್ವಿಚಾರಕರು	-	386
2.	ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯದ ನಿಲಯಪಾಲಕರು	-	127
3.	ಅಡುಗೆಯವರು	-	366
4.	ಅಡುಗೆ ಸಹಾಯಕರು	-	197
5.	ಕಾವಲುಗಾರರು : ಜವಾನರು	-	73
	ಒಟ್ಟು ಹುದ್ದೆಗಳು	-	1149